ಅಸಲು ದಾವೆ ಸಂಖ್ಯೆ - 125/2016
ಡಿಡಬ್ಲ್ಯು - 01

ದಿನಾಂಕಃ 21.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ. ಎಂ ಎಸ್ ಎಂ ವಕೀಲರಿಂದ**

ವಾದಿಯರು ಈ ದಾವೆಯನ್ನು ವಾರಸಾ ಘೋಷಣೆಯನ್ನು ಕೋರಿ ಸಲ್ಲಿಸಿರುತ್ತಾರೆ. ನನ್ನ ತಾಯಿ ದುರಗವ್ವ ತಂದೆ ಗುಡ್ಡಪ್ಪ ಮಾದರ ಅವರಿಗೆ ಸಂಬಂಧಪಟ್ಟ ವಾರಸಾ ಕೋರಿ ಸಲ್ಲಿಸಿರುತ್ತಾರೆ. ಗುಡ್ಡಪ್ಪ ಮಾದರ ಅವರ ತಂದೆ ಮತ್ತು ತಾಯಿಯ ಹೆಸರುಗಳು ನನಗೆ ಗೊತ್ತಿಲ್ಲ. ಮಲ್ಲಪ್ಪ ಮಾದರ ಉರ್ಫ ಗಾಳೆಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮಲ್ಲಪ್ಪ ಮಾದರ ಅವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂಬ ಸೂಚನೆಗೆ ಸಾಕ್ಷಿಯು ಮಲ್ಲಪ್ಪ ಮಾದರ ಮತ್ತು ದುರಗವ್ವ ಅವರ ಹೆಸರಿನಲ್ಲಿ ಒಟ್ಟು 5 ಎಕರೆ ಜಮೀನುಗಳು ಇದ್ದವು ಅಂತಾ ನುಡಿಯುತ್ತಾರೆ. ಮಲ್ಲಪ್ಪ ಮಾದರ ಮತ್ತು ಆತನ ಹೆಂಡತಿಯಾದ ಗಂಗವ್ವ ಇವರು ಯಾವಾಗ ಮರಣ ಹೊಂದಿರುತ್ತಾರೆ ಅಂತಾ ಗೊತ್ತಿಲ್ಲ.

2. ಮಲ್ಲಪ್ಪ ಮಾದರ ಅವರು ಗುಡ್ಡಪ್ಪರವರನ್ನು ಸಾಕುಮಗನಾಗಿ ಸಾಕಿದ್ದರು ಎಂದರೆ ಸರಿಯಲ್ಲ. ಗುಡ್ಡಪ್ಪರವರಿಗೆ ಯಾರು ದಿಕ್ಕಿಲ್ಲದಿದ್ದರಿಂದ ಆತನನ್ನು ಮಲ್ಲಪ್ಪ ಮಾದರರವರೇ ಸಾಕುಮಗನಾಗಿ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಗುಡ್ಡಪ್ಪರವರಿಗೆ ತಿಪ್ಪಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಸರಿ. ಸದರಿ ಗುಡ್ಡಪ್ಪ ಮತ್ತು ತಿಪ್ಪಮ್ಮರವರು ದುರಗವ್ವರವರನ್ನು ಸಾಕುಮಗಳಾಗಿ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಗುಡ್ಡಪ್ಪ ಮತ್ತು ತಿಪ್ಪಮ್ಮರವರಿಗೆ ವೈವಾಹಿಕ ಜೀವನದಿಂದ ಮಕ್ಕಳು ಜನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದುರಗವ್ವರವರು ಗುಡ್ಡಪ್ಪ ಮತ್ತು ತಿಪ್ಪಮ್ಮರವರ ವೈವಾಹಿಕ ಜೀವನದಿಂದ ಜನಿಸಿದ ಮಗಳು ಅಂತಾ ನುಡಿಯುತ್ತಾರೆ. ದುರಗವ್ವರವರು ಗುಡ್ಡಪ್ಪ ಮತ್ತು ತಿಪ್ಪಮ್ಮರವರ ವೈವಾಹಿಕ ಜೀವನದಿಂದ ಜನಿಸಿರದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯಾರ ವೈವಾಹಿಕ ಜೀವನದಿಂದ ದುರಗವ್ವ ಜನಿಸಿದ್ದಾರೆ ಅಂತಾ ತೋರಿಸಲು ದಾಖಲೆಗಳು ಇರುವುದಿಲ್ಲ.

3. ದುರಗವ್ವರವರನ್ನು ಗುಡ್ಡಪ್ಪ ಮತ್ತು ತಿಪ್ಪಮ್ಮರವರು ಸಾಕುಮಗಳಾಗಿ ಪಾಲನೆ ಮತ್ತು ಪೋಷಣೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಆಕೆಯು ಸದರಿಯವರ ಜನಿಸಿದ ಮಗಳು ಅಂತಾ ನುಡಿಯುತ್ತಾರೆ. ದುರಗವ್ವರವರು ಮದುವೆ ಆಗಿರುವುದಿಲ್ಲ ಮತ್ತು ಆಕಾರಣಕ್ಕೆ ಆಕೆಗೆ ಸಂತಾನ ಇರುವುದಿಲ್ಲ ಎಂದರೆ ಸರಿಯಲ್ಲ. ಗುಡ್ಡಪ್ಪ ಮತ್ತು ತಿಪ್ಪಮ್ಮರವರ ಸಾಕುಮಗಳಾದ ದುರಗವ್ವರವರಿಗೆ ಮಲ್ಲಪ್ಪ ಮಾದರ ರವರು ಆಕೆಯ ಜೀವನಕ್ಕಾಗಿ ಸ್ವಲ್ಪ ಆಸ್ತಿಯನ್ನು

ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದುರಗವ್ವರವರಿಗೆ ಮದುವೆಯಾಗಿ ಮಕ್ಕಳು ಇಲ್ಲದೇ ಇರುವುದರಿಂದ ಆಕೆಯ ಹೆಸರಿನಲ್ಲಿರುವ ಆಸ್ತಿಗಳು ಮಲ್ಲಪ್ಪ ಮಾದರರವರ ಮಕ್ಕಳಾದ 1 ರಿಂದ 4 ನೇ ವಾದಿಯರಿಗೆ ಸೇರುತ್ತವೆ ಎಂದರೆ ಸರಿಯಲ್ಲ. ದುರಗವ್ವ ಇವರಿಗೆ ಮಕ್ಕಳು ಇದ್ದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆಕೆಗೆ ಮಕ್ಕಳು ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದುರಗವ್ವ ಎಂಬ ಹೆಸರಿನ ಮಹಿಳೆಯು ಮಂಟಗಣಿ ಮತ್ತು ವೀರಾಪೂರ ಗ್ರಾಮಗಳಲ್ಲಿ ಸಾಕಷ್ಟು ಮಹಿಳೆಯರು ಇರಬಹುದು. ನಾನು ವೀರಾಪೂರದ ಖಾಯಂನಿವಾಸಿ. ಸದರಿ ವೀರಾಪೂರ ಗ್ರಾಮವು ಹಾವೇರಿ ಜಿಲ್ಲೆಯಲ್ಲಿದೆ.

4. ನಾನು ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ನಿವೃತ್ತಿ ಹೊಂದಿರುತ್ತೇನೆ. ಅಸಲು ದಾವೆ ನಂ.76/2015 ರ ದಾವೆಯಲ್ಲಿ ನಾನು ಮತ್ತು 3 ಜನ ಇತರರು ದುರಗವ್ವರವರ ಮಕ್ಕಳು ಎಂದು ಡಿಕ್ರಿಯನ್ನು ಪಡೆದಿರುತ್ತೇನೆ. ಸದರಿ ದಾವೆಯಲ್ಲಿ ಈ ದಾವೆಯ ವಾದಿಯರನ್ನು ಪಕ್ಕಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು 3 ಜನ ಇತರರು ದುರಗವ್ವರವರ ಮಕ್ಕಳು ಎಂದು ತೋರಿಸಲು ಪ್ರಸ್ತುತ ದಾವೆಯಲ್ಲಾಗಲಿ ಅಥವಾ ಸದರಿ ಹಿಂದಿನ ದಾವೆಯಲ್ಲಾಗಲೀ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದುರಗವ್ವರವರಿಗೆ ಗಂಡ ಇದ್ದ ಪಕ್ಷದಲ್ಲಿ ಆಕೆಗೆ ಹೆಸರಿಗೆ ಯಾವ ಕಾರಣಕ್ಕೆ ಗಂಡನ ಹೆಸರು ನಮೂದು ಇರುವುದಿಲ್ಲ ಎಂಬ ಸೂಚನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ದುರಗವ್ವರವರ ಹೆಸರಿನಲ್ಲಿದ್ದ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತುತ ದಾವೆಯ ವಾದಿಯರನ್ನು ಅಸಲು ದಾವೆ ನಂ.76/2015 ರಲ್ಲಿ ಪಕ್ಷಗಾರರನ್ನಾಗಿ ಮಾಡದೇ ಮೋಸದಿಂದ ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದುರಗವ್ವ ತಂದೆ ಗುಡ್ಡಪ್ಪ ಮಾದರ ಉರ್ಫ ಗಾಳೆಪ್ಪನವರವರಿಗೆ ಮದುವೆ ಆಗಿರುವುದಿಲ್ಲ ಮತ್ತು ಮಕ್ಕಳು ಇಲ್ಲದೇ ಇರುವುದರಿಂದ ನಾನಗಲೀ ಅಥವಾ 2 ರಿಂದ 4 ನೇ ಪ್ರತಿವಾದಿಗಳಾಗಲೀ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗಿರುವ ಹಕ್ಕನ್ನು ನಷ್ಟಗೊಳಿಸಲು ಮತ್ತು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪುರಷ ಮಲ್ಲಪ್ಪ ಮಾದರ ಉರ್ಫ ಗಾಳೆಪ್ಪನವರವರ ಆಸ್ತಿಗೆ ವಾದಿಗಳು ಮಾತ್ರ ಹಕ್ಕುದಾರರು ಎಂದರೆ ಸರಿಯಲ್ಲ.

5. ಮಲ್ಲಪ್ಪ ಮಾದರರವರು ಮರಣ ಹೊಂದಿದ ನಂತರ ಆತನ ಹೆಸರಿನಲ್ಲಿದ್ದ ಆಸ್ತಿಗಳಿಗೆ ವಾದಿಯರು ಕಂದಾಯ ದಾಖಲಾತಿಗಳಲ್ಲಿ ಹೆಸರನ್ನು ಬದಲಿಸಿಕೊಂಡು ಮಾಲೀಕರಾಗಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅವರ ಹಿಸ್ಸೆಗೆ ಸಂಬಂಧಿಸಿದ ಆಸ್ತಿಗೆ ಮಾಲೀಕರು ವ ವಹಿವಾಟುದಾರರು ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ವಾದಿಯರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿರುವ ಆಸ್ತಿಗಳನ್ನು ಅವುಗಳ ವಹಿವಾಟಿಗೆ ವಾದಿಯರಿಗೆ ನಾನು ಮತ್ತು ಇತರ ಪ್ರತಿವಾದಿಗಳು ತೊಂದರೆ ನೀಡಿರುತ್ತೇವೆ ಎಂದರೆ ಸಾಕ್ಷಿಯು ದಾವಾ ಆಸ್ತಿಗಳು ಅವರ ಮಾಲೀಕತ್ವ ಮತ್ತು ಕಬ್ಜೆಯಲ್ಲಿ ಇರುವುದಿಲ್ಲ ಅಂತಾ ನುಡಿಯುತ್ತಾರೆ. ದಾವಾ ಆಸ್ತಿಗಳು ವಾದಿಯರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ವಾದಿಯರು, ನಮ್ಮ ತಾಯಿ ಮತ್ತು ಪ್ರತಿವಾದಿಗಳ ಜಂಟಿ ಹೆಸರಿನಲ್ಲಿವೆ ಎಂದು ನುಡಿಯುತ್ತಾರೆ.

6. ಅಸಲು ದಾವಾ ನಂ.76/2015 ರಲ್ಲಿ ಡಿಕ್ರಿಯಾದ ನಂತರ ಅದರ ದೃಢಿಕೃತ ನಕಲನ್ನು ಸವಣೂರಿನ ತಹಶೀಲ್ದಾರರವರಿಗೆ ಸಲ್ಲಿಸಿ ಖಾತೆ ಬದಲಾವಣೆಯನ್ನು ಮಾಡಲು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯ ಮೇಲೆ ಯಾವ ಆದೇಶವಾಗಿದೆ ಎಂದು ನನ್ನ ಮಾಹಿತಿಗೆ ಇದೆ ಎಂದರೆ ಸರಿ. ಸದರಿ ಅರ್ಜಿಗೆ ಈ ದಾವೆಯ ವಾದಿಯರು ತಕರಾರು ಸಲ್ಲಿಸಿದ ಕಾರಣಕ್ಕೆ ತಹಶೀಲ್ದಾರವರ ನ್ಯಾಯಾಲಯದಲ್ಲಿ ಪ್ರಕರಣವು ನಡೆದಿತ್ತು ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ ಆರ್.ಟಿ.ಡಿ.ಎಸ್.ಎಸ್.ಆರ್-5/2016-17 ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಆದ ಅಂತಿಮ ಆದೇಶದ ಬಗ್ಗೆ ಇಂದಿಗೂ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆದ ಅಂತಿಮ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅಸಲು ದಾವೆ ನಂ.76/2015 ದಾವೆಯಲ್ಲಿ ಡಿಕ್ರಿಯನ್ನು ಪಡೆದಾಗ ಮತ್ತು ಸದರಿ ಪ್ರಕರಣದ ಸಂಖ್ಯೆ ಆರ್.ಟಿ.ಡಿ.ಎಸ್.ಎಸ್.ಆರ್-5/2016-17 ಪ್ರಕರಣವು ಬಾಕಿ ಇದ್ದಾಗ ನಾನು ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ ಎಂದರೆ ಸರಿ, ಸಾಕ್ಷಿಯು 2019 ರಲ್ಲಿ ನಿವೃತ್ತಿ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಂದಾಯ ಅಧಿಕಾರಿಗಳ ಪ್ರಕರಣದಲ್ಲಿ ನಾನು ದುರಗವ್ವರವರ ಮಕ್ಕಳು ಅಲ್ಲ ಎಂದು ತೀರ್ಮಾನಗೊಂಡಿದ್ದರಿಂದ ಮತ್ತೆ ಪ್ರಕರಣವನ್ನು ಮುಂದುವರೆಸಿದರೆ ನನ್ನ ಕೆಲಸ ಹೋಗಬಹುದು ಎಂದು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

7. ದುರಗವ್ವರವರು ಮಂಟಗಣಿ ಗ್ರಾಮದಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ದುರಗವ್ವ ಎಂಬ ಹೆಸರಿನ ಸಾಕಷ್ಟು ಮಹಿಳೆಯರು ಇರುವ ಬಗ್ಗೆ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ದಾವಾ ಆಸ್ತಿಗಳನ್ನು ಎತ್ತಿ ಹಾಕಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪುರುಷ ಮಲ್ಲಪ್ಪ ಮಾದರ ಅವರಿಗೆ ಸಂಬಂಧಿಸಿದ ದಾವಾ ಆಸ್ತಿಗಳ ಮೇಲೆ ನನಗಾಗಲೀ ಇತರ ಪ್ರತಿವಾದಿಯರಿಗಾಗಲೀ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲ ಮತ್ತು ಅವುಗಳನ್ನು ಪ್ರಕರಣದಲ್ಲಿ ಅನುಕೂಲಪಡಿಸಲು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.